10.20 ಎ.ಎಂ

ಬೈಲಹೊಂಗಲ್,ಸಾದತ್ತಿ, ಗೋಕಾಕ್, ರಾಮದುರ್ಗದಲ್ಲಿ ಇವತ್ತಿನದಿವಸ ಕಳ್ಳಬಟ್ಟಿ ತಯಾರಿಸುತ್ತಿದ್ದಾರೆ. ಹೀಗಾಗಿ ಮೊನ್ನೆ 3 ಜನ ಹಳಕಿ ಗ್ರಾಮದಲ್ಲಿ ಸತ್ತಿದ್ದಾರೆ. 4-5 ಜನ ಸಿವಿಲ್ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದಾರೆ. ಈ ಕಳ್ಳಭಟ್ಟಿ ತಯಾರಿಕೆಯನ್ನು ನಿಲ್ಲಿಸುವಪುದಕ್ಕೆ ಯಾವ ಕ್ರಮ ತೆಗೆದುಕೊಂಡಿದ್ದೀರಿ ? ಇದಕ್ಕೆ ಶಾಮಿಲು ಆಗಿರುವ ಎಕ್ಸೆಸ್ ಇಲಾಖೆಯ ಅಧಿಕಾರಿಗಳ ಮೇಲೆ ಯಾವ ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳುತ್ತೀನೆ ?

ಶ್ರೀ ಎಂ.ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು) : ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಪ್ರಾಚಾರ್ಯರಾದ ನಂಜುಂಡಸ್ವಾಮಿಯವರು ಮತ್ತು ವಾಟಾಳ್ ನಾಗರಾಜ್ ಅವರು ತೆಲುಗು-ಗಂಗಾ ಮತ್ತು ಸಮಾನಾಂತರ ಕಾಲುವೆ ಬಗ್ಗೆ ಮಾತನಾಡಿದ್ದಾರೆ. ಈಗ ನಮ್ಮ ವಾದ ಅಂತೂ ಸ್ಪಷ್ಟ ಇದೆ. ಏಕೆಂದರೆ ನಮಗೆ ಬಚಾವತ್ ಅವಾರ್ಡ್ ಪ್ರಕಾರ ಏನು ನಮ್ಮ ಪಾಲಿಗೆ ನೀರು ಬಂದಿದೆ ಅದನ್ನು ನಾವು 2000 ಎ.ಡಿ. ಒಳಗೆ ನಾವು ಖಂಡಿತಾ ಉಪಯೋಗ ಮಾಡಿಕೊಳ್ಳುತ್ತೇವೆ. ಅದರಲ್ಲಿ ಕಾಂಪ್ರಮೈಸ್ ಇಲ್ಲ. ತೆಲುಗು ಗಂಗಾ ಅಥವಾ ಸಮಾನಾಂತರ ಕಾಲುವೆ ಈ ಬಚಾವತ್ ಒಳಗೆ ಬರುವುದಿಲ್ಲ.It is totally unauthorised and it is totally illegal.ಅದಕ್ಕೆ ನಮ್ಮ ಕರ್ನಾಟಕ ಬೆಂಬಲ ಕೊಡುವ ಪ್ರಶ್ನೆಯೇ ಇಲ್ಲ. ಇದಕ್ಕೆ ತೀವ್ರವಾದ ಪ್ರತಿಭಟನೆಯನ್ನು ಈಗಾಗಲೇ ಸಲ್ಲಿಸಿದ್ದೇವೆ. ಎರಡನೆಯದು ಎಂದರೆ (ಬಿ) ಸ್ಕೀಮ್ ಪ್ರಕಾರ 2000 ಎ.ಡಿ. ಯೊಳಗೆ ನೀರನ್ನು ಉಪಯೋಗ ಮಾಡಬೇಕಾಗಿದೆ. ಅದರ ಬಗ್ಗೆ ಸಮಾಲೋಚನೆ ಆಗಬೇಕಾಗಿದೆ We are prepared for the discussion even now.ಇದಕ್ಕಾಗಿ ಹಾಗೆ ಮಹರಾಷ್ಟ್ರದ ಮುಖ್ಯಮಂತ್ರಿಯಾಗಿದ್ದ ಆ ಸುಧಾಕರ್ ನಾಯಕ್ ರವರು ನಮ್ಮನ್ನು ಕರೆದಿದ್ದರು.ಸಮ್ಮನ್ನು ಮತ್ತು ಆಂಧ್ರಪ್ರದೇಶದ ಮುಖ್ಯ ಮಂತ್ರಗಳನ್ನು ಕರೆಸಿ (ಬಿ) ಸ್ಕೀಮ್ ಬಗ್ಗೆ ಸಮಾಲೋಚನೆ ಮಾಡೋಣ ಎಂದು ಹೇಳಿದ್ದರು. ಆ ಸಭೆ ಮುಂದೂಡಲ್ಪಟ್ಟಿತು. ಈ ಬಗ್ಗೆ ಮುಂದೆ ಸಭೆ ಕರೆದಾಗ ಇದರ ಬಗ್ಗೆ ನಮ್ಮ ನ್ಯಾಯವಾದ ಸ್ಪಷ್ಟವಾದ ಅಭಿಪ್ರಾಯವನ್ನು ಖಂಡಿತವಾಗಿ ವ್ಯಕ್ತ ಮಾಡುತ್ತೇವೆ. ಆದರೆ ನಮ್ಮ ಪಾಲಿನ ನೀರನ್ನು ಪಡೆಯಲು ತೆಲುಗು-ಗಂಗಾ ಮುಖಾಂತರ ಸಮಾನಾಂತರ ಕಾಲುವೆ ಏನು ಮಾಡಬೇಕೆಂದು ಅಪೇಕ್ಷೆ ಪಟ್ಟಿದ್ದಾರೆ ಅದಕ್ಕೆ ಅವಕಾಶ ಕೊಡತಕ್ಕ ಪ್ರಶ್ನೆಯೇ ಇಲ್ಲ. ಅದನ್ನು ಕರ್ನಾಟಕ ಸರ್ಕಾರ ತೀವ್ರವಾಗಿ ವಿರೋಧ ಮಾಡುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಅವರು ಕಾರ್ಯಾಲಯ ತೆರೆದಿದ್ದಾರೆ.

ಶ್ರೀ ಎಂ. ವೀರಪ್ಪ ಮೆಯ್ಲಿ : ಅವರ ಜಾಗದಲ್ಲಿ ಅವರು ಕಾರ್ಯಾಲಯ ತೆಗೆದರೆ ನಾವು ಏನು ಮಾಡುವುದಕ್ಕೆ ಬರುತ್ತದೆ ? ಆದರೆ ನಮ್ಮ ಹಕ್ಕು ಬಿಟ್ಟುಕೊಡತಕ್ಕ ಪ್ರಶ್ನೆ ಇಲ್ಲ. ನಮ್ಮ ಪಾಲಿನ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಖಂಡಿತಾ ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ.

ಪ್ರೊ : ಎಂ. ಡಿ. ನಂಜುಂಡಸ್ವಾಮಿ : ಒಂದು ನಿಮಿಷ ಕೇಳಬೇಕು. ಏಕೆ ಹೇಳುತ್ತಿದ್ದೇನೆಂದರೆ, ಹಿಂದೆ ಇದ್ದ ನೀರಾವರಿ ಎಂಜಿನಿಯರ್‌ಗಳಿಗೆ ಸರಿಯಾದ ಮಾಹಿತಿ ಇತ್ತು. ಆದರೆ ಈಗ ನಿಮ್ಮಲ್ಲಿರುವ ಇಂಜಿನೀಯರ್‌ಗಳಿಗೆ ಮಾಹಿತಿ ಇಲ್ಲ. ಏಕೆಂದರೆ ಅಪ್ಪರ್ ತುಂಗಾ, ಅಪ್ಪರ್ ಭದ್ರಾ ಎಂದ ಕೂಡಲೇ ಅವರು 16 ಟಿಎಂಸಿ ಅಡಿ ಲೆಕ್ಕದಲ್ಲಿ ಯೋಜನೆ ತಯಾರು ಮಾಡಿ ಕೊಡುತ್ತಿದ್ದಾರೆ. ಆದರೆ ನಮ್ಮ ಪಾಲು ಇರುವುದು 130 ಟಿಎಂಸಿ ಅಡಿ.Our engineers of the Irrigation Department do not have even this information.ಆಮೇಲೆ ನಿಮ್ಮ ನೀರಾವರಿ ಮಂತ್ರಿಗಳನ್ನು ಬದಲಾವಣೆ ಮಾಡುತ್ತಾ ಹೋಗಿರುತ್ತೀರಿ. ಆದುದರಿಂದ ನಿಮಗೆ ಮಾಹಿತಿ ಇಲ್ಲ. ಅದುದರಿಂದ ಇದನ್ನೆಲ್ಲಾ ಅವರು ತಿಳಿದುಕೊಂಡು ಅವರು ಪ್ಯಾರಲಲ್ ಕೆನಾಲ್ ಡಿನಿಜನ್ ಎಂದು ಬೋರ್ಡ್ ಹಾಕಿಕೊಂಡು ಕಛೇರಿ ಪ್ರಾರಂಭ ಮಾಡಿದ್ದಾರೆ.You have to tell the Andhra Pradesh Government that our rightful share is 450 Tmcft, out of which we have utilised only 320 Tmcft and the remaining 130 TMCFt is required for us for upper Tunga and Upper Bhadra ಇದನ್ನು ನೀವು ಸ್ಪಷ್ಟಪಡಿಸಬೇಕು. ಮತ್ತೆ ಕಾಲುವೆ ತೋಡುವ ಸ್ವಾತಂತ್ರ್ಯ ಅವರಿಗೆ ಇದೆ. ಬಾವೀನೂ ತೋಡಿಕೊಳ್ಳಬಹುದು, ಸಮಾಧೀನೂ ತೋಡಿಕೊಳ್ಳಬಹುದು, ಅವರ ಟೆರಿಟರಿಯಲ್ಲಿ. ಆದರೆ ಒಂದು ಹನಿ ನೀರೂ ಬಿಡುವುದಿಲ್ಲ ಎಂದು ತಾವು ಅವರಿಗೆ ಕ್ಯಾಟಗಾರಿಕಲಿ ಹೇಳಬೇಕು.

ಶ್ರೀ ಎಂ.ವೀರಪ್ಪ ಮೊಯ್ಲಿ : ಪ್ರಚಾರ್ಯ ನಂಜುಂಡಸ್ವಾಮಿಯವರು ಹೇಳಿದ್ದುಸರಿ. ತಾವು ಕೆಲವು ಸೂಚನೆಗಳನ್ನು ಕೊಟ್ಟಿದ್ದೀರಿ. ಇದರ ಬಗ್ಗೆ ಅವರಿಗೂ ಕೂಡಾ ತಾವು ಹೇಳಿದ ಪ್ರಕಾರ ಸಂಪೂರ್ಣ ಮಾಹಿತಿಯನ್ನು ಕೊಟ್ಟಿ ಆನಂತರ ಬೇಕಾದರೆ ನಾವು ಪ್ರತಿಭಟನೆ ಸಲ್ಲಿಸುತ್ತೇವೆ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಈ ಬುಕ್‌ಲೆಟ್‌ನ್ನು ನೀರಾವರಿ ಮಂತ್ರಿಗಳಿಗೆ ಕೊಟ್ಟಿದ್ದೆ. ಇದನ್ನು ಮಾನ್ಯಮುಖ್ಯಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ. ಇದು ನನ್ನ ಮಾಹಿತಿ ಅಲ್ಲ. ಡಿ.ಬಾಳಿಕುಂದರಗಿಯವರು ಬರೆದಿರತಕ್ಕಬುಕ್‌ಲೆಟ್. ಇದರಲ್ಲಿ ಸರಿಯಾವ ಮಾಹಿತಿ ಇದೆ. ಅದನ್ನು ಕೊಡುತ್ತಿದ್ದೇನೆ.

ಶ್ರೀ ಕೆ.ಹೆಚ್.ರಂಗನಾಥ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ನಂಜುಂಡಸ್ವಾಮಿ ಯವರು ಪ್ರಸ್ತಾಪ ಮಾಡುತ್ತಿದ್ದರು ಏನೆಂದರೆ ಅಪ್ಪರ್‌ತುಂಗ ಮತ್ತು ಅಪ್ಪರ್‌ಭದ್ರಾಕ್ಕೆ 130 ಟಿಎಂಸಿಫ್ಟಿ ಯಷ್ಟು ನೀರನ್ನು ಉಪಯೋಗಿಸಿ ಕೊಳ್ಳಬಹುದು ಅಂತ ಅದು ಬಚಾವತ್ ಆಪಾರ್ಡ್‌ನಲ್ಲಿಯೆ ಅಥವಾ ಬುಕ್‌ಲೆಟ್ ನಲ್ಲಿದೆಯೇ?

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಬುಕ್‌ಲೆಟ್ ಅಲ್ಲ. ನಮ್ಮಲ್ಲಿ ಸಂಗ್ರಹವಾಗುವಂಥದ್ದು ಮಲ್ಲಾಪುರದವರೆಗೆ 450 ಟಿಎಂಸಿಎಫ್ಟಿ ತುಂಗಭದ್ರ ಅಪ್ಪರ್ ಜಲಾವಯನ ಪ್ರದೇಶದಲ್ಲಿ ಕರ್ನಾಟಕದಲ್ಲಿ ಅಷ್ಟು ನೀರು ಸಂಗ್ರಹಣೆಯಾಗುತ್ತದೆ. ಅದು ಕರ್ನಾಟಕ ಪಾಲು.

ಶ್ರೀ ಕೆ.ಹೆಚ್. ರಂಗನಾಥ್ : ಸಂಗ್ರಹಣೆಯಾಗುವುದು.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಕರ್ನಾಟಕದ ಪಾಲು ಎಷ್ಟೆಂದು ಬಚಾವತ್ ಅವಾರ್ಡ್‌ನಲ್ಲಿ ಮೆನ್‌ಷನ್ ಆಗಿದೆ.

ಶ್ರೀ ಬಿ. ಎಸ್ ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಇರಲಿಲ್ಲ. ರೈತರ ಸಹಕಾರ ಸಂಘಗಳ ಸಾಲಗಳ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುವ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆಂದು ಹೇಳಿದ್ದರು. ದಯಮಾಡಿ ಈಗ ಮಾಡಿದರೆ ಒಳ್ಳಯದು.

ಶ್ರೀ ಎಂ. ವೀರಪ್ಪಮೊಯ್ಲಿ : ನಾಳೇ 8ನೇ ತಾರೀಖಿಗೆ ಸ್ಟೇಟ್‌ಮೆಂಟ್ ಮಾಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ನಾಳೆ ಸದನ ಮುಗಿದು ಹೋಗುತ್ತದೆ. ಈಗ ಸಹಕಾರ ಮಂತ್ರಿಗಳು ಭರವಸೆಯನ್ನು ಕೊಟ್ಟರು. ಕ್ಯಾಬಿನೆಟ್ ಮಿಟಿಂಗ್‌ನಲ್ಲಿ ಚರ್ಚೆಯಾಗುತ್ತಿದೆ, ಇವತ್ತೆ ಸ್ಟೇಟ್‌ಮೆಂಟ್ ಮಾಡುತ್ತಾರೆಂದುಹೇಳಿದ್ದರು. ಆದ್ದರಿಂದ ಇವತ್ತೇ ಮಾಡಿದರೆ ಮತ್ತೆ ನಾವು ಸಮಾಲೋಚನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ನಾಳೆ ಹೇಳಿಕೆ ಮಾಡಿದರೆ ಅದು ಸರಿಯಾಗುವುದಿಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ : ನಾಳೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಇವತ್ತು ತಾವು ಹೇಳಿಕೆ ಕೊಟ್ಟರೆ ನಾವು ಅದು ನೋಡಿಕೊಂಡು ಚರ್ಚೆ ಮಾಡಬಹುದು. ಇವತ್ತೇ ಮಾಡಿ ಸ್ವಾಮಿ.

ಶ್ರೀ ಸಿ. ಬೈರೇಗೌಡ : ಈ ವಿಚಾರದಲ್ಲಿ ಚೌಕಾಸಿ ಮಾಡಬೇಡಿ.

ಶ್ರೀ ಎಂ. ವೀರಪ್ಪಮೊಯಿಲಿ : ಚೌಕಾಸಿ ಏನೂ ಇಲ್ಲ. ತಾರೀಖು 7 ಅಷ್ಟು ಚೆನ್ನಾಗಿಲ್ಲ. ನಮ್ಮ ನಿಮ್ಮ ಗ್ರಹಗತಿ 8ನೇ ತಾರೀಖಿಗೆ ಬಹಳ ಚೆನ್ನಾಗಿದೆ. ಬಹಳ ಲಕ್ಕಿ ನಂಬರ್ ಅದು.

ಶ್ರೀ ವಾಟಾಳ್ ನಾಗರಾಜ್ : 8ನೇ ನಂಬರ್ ಅದು ಅಷ್ಟು ಸರಿಯಿಲ್ಲ, ಅದು ಅಷ್ಟಮ ಶನಿ.

ಉಪಾಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ವಾಟಾಳ್‌ನಾಗರಾಜ್ : ನಿಮ್ಮ ಜೊತೆಯಲ್ಲಿ ನಾವು ಸಹಕಾರ ಮಾಡಿದ್ದೇವೆ. ನಮ್ಮದೊಂದು ಮನವಿಯನ್ನು ತಾವು ಕೇಳಬೇಡವೆ? ಇವತ್ತು ಸಾಯಂಕಾಲ

ಸ್ಟೇಟ್‌ಮೆಂಟ್ ಮಾಡಿಸ್ವಾಮಿ ಇವತ್ತು ಶುಭ ಗಳಿಗೆಯನ್ನು ನಾನು ನೋಡಿ ತಂದು ಕೊಡುತ್ತೇನೆ. ಜ್ಯೋತಿಷಿಗಳನ್ನು ಬೇಕಾದರೆ ನಾನು ಕೇಳುತ್ತೇನೆ. ನಮ್ಮ ಮುಖ್ಯಮಂತ್ರಿಗಳು ಹೇಳಿಕೆ ಕೊಡಬೇಕಾದರೆ ಒಳ್ಳಯ ಕಾಲ ಯಾವುದೆಂದು ನಾನು ಕೇಳುತ್ತೇನೆ. ಒಳ್ಳಯ ಕಾಲವನ್ನು ತಂದು ಕೊಡುತ್ತೇನೆ, ಆ ಕಾಲದಲ್ಲಿ ನೀವು ಒಂದು ಸ್ಟೇಟ್‌ಮೆಂಟ್ ಮಾಡಿಬಿಡಿ.

ಶ್ರೀ ಎಂ. ವಿರಪ್ಪಮೊಯಿಲಿ : ಯಾವ ಕಾಲ ಒಳ್ಳೆಯದೆಂದು ಸಮಾಲೋಚನೆ ಮಾಡೋಣ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಜೋಯಿಸರು ಬೇಡದಿದ್ದರೆ ಬಿಡಿ,ಮಾನ್ಯ ರಂಗನಾಥ್‌ರವರಿಗೆ ವಹಿಸೋಣ ತಾವು ಯಾರನ್ನು ಬೇಕಾದರೂ ಕೇಳಿ.

ಉಪಾಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಚಿಕ್ಕೇಗೌಡರೇ ತಾವು ಅದೇನು ಪ್ರಸ್ತಾಪ ಮಾಡಿ.

ಶ್ರೀ ಎನ್. ಚಿಕ್ಕೇಗೌಡ : ಮಾನ್ಯ ಮುಖ್ಯಮಂತ್ರಿಗಳು ಸಭೆಯಲ್ಲಿದ್ದಾರೆ ಅವರು ಆರೋಗ್ಯಮಂತ್ರಿಗಳು ಹೌದು. ನಿನ್ನೆ ದಿವಸ ಮಾಲೂರಿನಲ್ಲಿ ನಡೆದಂತಹ ಒಬ್ಬ ಮಹಿಳೆಯ ಮೇಲೆ ಅತ್ಯಾಚಾರದ ಘಟನೆಯ ಬಗ್ಗೆ ಇವತ್ತಿನ ಪತ್ರಿಕೆಗಳಲ್ಲಿ ಬಂದಿರತಕ್ಕ ವಿಚಾರವನ್ನು ಶೂನ್ಯವೇಳೆಯಲ್ಲಿ ನಾನು ಪ್ರಸ್ತಾಪ ಮಾಡಿದ್ದೇನೆ. ಅದು ಬಹಳ ದೊಡ್ಡ ಒಂದು ಘಟನೆ. ಎರಡನೇ ಸಾರಿ ಅದೇ ಸರ್ಕಾರಿ ವೈದ್ಯ ಪಾಲಾಕ್ಷ ಎಂಬುವವಳ ಮೇಲೆ ಅತ್ಯಾಚಾರ ಮಾಡಿದ್ದಾನೆ.

ಶ್ರೀ ಎಂ.ವೀರಪ್ಪಮೊಯಿಲಿ : ಮಾನ್ಯ ಉಪಾಧ್ಯಕ್ಷರೆ, ಆ ಮಾಲೂರು ಡಾಕ್ಟರನ್ನು ಈಗಾಗಲೇ ಸಸ್ಪೆಂಡ್ ಮಾಡಲಾಗಿದೆ.

ಶ್ರೀ ಎನ್. ಚಿಕ್ಕೇಗೌಡ : ಸಸ್ಪೆಂಡ್ ಮಾಡಿದರೆ ಸಾಲರು. ಅವನ ಮೇಲೆ ಕ್ರಮ ತೆಗೆದುಕೊಂಡು ಕಟ್ಟಲೆ ಹಾಕಿ.

ಶ್ರೀ ಸಿ. ಬೈರೇಗೌಡ : ಅವನನ್ನು ಬಂಧಿಸಿ ಅವನ ಕೈಗೆ ಬೇಡಿಹಾಕಿ ಮಾಲೂರು ನಗರದಲ್ಲಿ ಅಲ್ಲಿ, ಇಡೀ ಮಾಲೂರು ತಾಲ್ಲೂಕಿನಲ್ಲಿ ಅವನನ್ನು ಮೆರವಣಿಗೆ ಮಾಡಿಸಬೇಕು. ಏಕೆಂದರೆ ಇದು ಎರಡನೇ ಸಾರಿ ಮಾಡುತ್ತಾ ಇರುವುದು. ಮೊದಲನೆಯ ಸಾರಿ ಆಗಿದ್ದರೆ ಏನೋ ಆಯಿತೆಂದು ಹೇಳಬಹುದಾಗಿತ್ತು. ಅದೇ ಹವ್ಯಾಸ ಇರತಕ್ಕ ವೈದ್ಯರು ಅವರು. ಇಂತಹವರನ್ನು ತೆಗೆದುಕೊಂಡು ಹೋಗಿ ಹಳ್ಳಿಯ ಪ್ರದೇಶಗಳಲ್ಲಿ ಹಾಕುತ್ತೀರಿ. ದಯವಿಟ್ಟು ಅವರಿಗೆ ಕೈಗೆ ಬೇಡಿಯನ್ನು ತೋಡಿಸಿ ಮಾಲೂರು ನಗರದಲ್ಲೇ ಅಲ್ಲ,ಇಡೀ ಮಾಲೂರು ತಾಲ್ಲೂಕಿನಲ್ಲೇ ಈ ಮಹಾಕಾರ್ಯ ಮಾಡಿರತಕ್ಕ ವೈದ್ಯರಿಗೆ ಮೆರವಣಿಗೆ ಮಾಡಿಸುವುದಕ್ಕೆ ದಯವಿಟ್ಟು ಏರ್ಪಾಟು ಮಾಡಿಸಿ.

ಶ್ರೀ ಎನ್. ಚಿಕ್ಕೇಗೌಡ : ಮಾನ್ಯ ಉಪಾಧ್ಯಕ್ಷರೆ, ಒಬ್ಬ ಸಾಮಾನ್ಯ ಪ್ರಜೆ ಯಾರಾದರೂ ಅತ್ಯಾಚಾರದ ಘಟನೆಯಲ್ಲಿ ತೊಡಗಿದ್ದು ಮೇಲ್ನೋಟಕ್ಕೆ ಸಾಬೀತಾದರೆ ಅವನನ್ನು ತಕ್ಷಣ ಅರೆಸ್ಟ್ ಮಾಡುತ್ತಾರೆ. ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಲ್ಲಿ ಏನೇನು ಸೆಕ್ಷನ್‌ಗಳು ಇವೆ, ಅವುಗಳನ್ನೆಲ್ಲ ಅಪ್ಲೈ ಮಾಡುತ್ತಾರೆ. ಅಂತವರಿಗೆ ಕೈಕೋಳವನ್ನು ಹಾಕಿಕೊಂಡು ಬೀದಿಯಲ್ಲಿ ಮೆರವಣಿಗೆ ಮಾಡುತ್ತಾರೆ. ನಿನ್ನೆ ದಿವಸ ಐದಾರು ಸಾವಿರ ಜನ ಸೇರಿದ್ದಾರೆ. ಅಲ್ಲಿನ ಪುರಸಭೆಯ ಅಧ್ಯಕ್ಷರು ಸೇರಿದ್ದಾರೆ. ಈ ವೈದ್ಯ ಇದು ಎರಡನೆಯ ಸಾರಿ ಪ್ರಯತ್ನ ಮಾಡಿರುವುದು. ಇದು ಮೊದಲನೆಯ ಸಾರಿ ಅಲ್ಲ. Law of the land will apply to all, whether he is a doctor or anybody for that matter ಅದ್ದರಿಂದ ದಯವಿಟ್ಟು ಮುಖ್ಯಮಂತ್ರಿಗಳು ಸಂಬಂಧಪಟ್ಟ ಆರೋಗ್ಯ ಇಲಾಖೆಯನ್ನು ಹೊಂದಿರುವುದರಿಂದ ಅವನ ಮೇಲೆ ತತ್‌ಕ್ಷಣ ಈ ಕಟ್ಟಲೆಗಳನ್ನೆಲ್ಲ ದಾಖಲೆ ಮಾಡಿಕೊಂಡು ಅರೆಸ್ಟ್ ಮಾಡಿ ಅವನನ್ನು ಜೈಲಿಗೆ ಕಳುಹಿಸತಕ್ಕ ಕೆಲಸವನ್ನು ಮಾಡಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅವನನ್ನು ಅಮಾನತ್ ಮಾಡಿದರೆ ಸಾಲದು. ಏಕೆಂದರೆ ಇದು ಎರಡನೆಯ ಸಾರಿ ಅವನು ಮಾಡುತ್ತಿರುವುದು. ಅದ್ದರಿಂದ ದಯವಿಟ್ಟು ಮುಖ್ಯಮಂತ್ರಿಗಳು ಇದರ ಬಗ್ಗೆ ವಿಚಾರ ಮಾಡಿ ಉತ್ತರ ಕೊಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎಂ.ವೀರಪ್ಪ ಮೊಯ್ಲಿ : ಸನ್ಮಾನ್ಯ ಉಪಾಧ್ಯಕ್ಷರೇ, ತಾವು ಹೇಳಿದ ಕೂಡಲೇ ಅವನನ್ನು ಅಮಾನತ್ತು ಮಾಡಿದ್ದೇವೆ ಎಂದು ಹೇಳಿದ್ದೇನೆ. ಎರಡನೆಯ ಪ್ರಶ್ನೆಗೆ ಈಗಾಗಲೇ ಉತ್ತರ ಕೊಡಬೇಕು ಎಂದರೆ ಅದು ಆಗುವುದಿಲ್ಲ. ಏಕೆಂದರೆ ನಾವು ಕಾನೂನೂ ಪ್ರಕಾರ ಮಾಡಬೇಕಾಗುತ್ತದೆ. ಅವರು ಹಿಂದೆ ಕೂಡ ಇಂತಹ ಘಟನೆಯಲ್ಲಿ ಒಳಗೊಂಡಿದ್ದರು. ಎಂದು ನಮಗೆ ಕೂಡ ವರದಿ ಬಂದಿದೆ. ಅದಕ್ಕೆ ನಾವು ಕಾನೂನು ಪ್ರಕಾರ ಕ್ರಿಮಿನಲ್ ಮೊಕದ್ದಮೆ ಹಾಕುವುದಕ್ಕೆ ಈಗಾಗಲೇ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಬೇಡಿ ತೋಡಿಸುವುದು ಪೋಲಿಸರಿಗೆ ಬಿಟ್ಟಿದ್ದು. Police is already seized of the matter. ಅವರು ಕೂಡ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ವಿದ್ಯುಚ್ಚಕ್ತಿ ಬಗ್ಗೆ ನಾನು ನೋಟೀಸ್ ಕೊಟ್ಟಿದ್ದೆ.

ಉಪಾಧ್ಯಕ್ಷರು : ವಿದ್ಯುಚ್ಚಕ್ತಿ ಬಗ್ಗೆ ಮಾತನಾಡಿ ಎಂದು ನಾನು ಆವಾಗಲೇ ನಿಮ್ಮನ್ನು ಕರೆದದ್ದು. ನೀವು ಅರ್ಧಗಂಟೆಯಲ್ಲಿ ಮುಗಿಸಿಬಿಡುತ್ತೇನೆ ಅಂತ ಜಂಟಲ್‌ಮನ್ ಅಗ್ರಿಮೆಂಟ್‌ಗೆ ಬಂದು ತಿರುಗಿ ನೀವು.....

ಶ್ರೀ ವಾಟಾಳ್ ನಾಗರಾಜ್ : ದಯವಿಟ್ಟು ಕೋಪ ಮಾಡಿಕೊಳ್ಳಬೇಡಿ. ತಮ್ಮ ಬಗ್ಗೆ ನನಗೆ ಬಹಳ ಗೌರವ ಇದೆ.

ಶ್ರೀ ಎಸ್. ಎಚ್.ಕೌಜಲಗಿ : ಕಳ್ಳಬಟ್ಟಿ ಬಗ್ಗೆ ಸರ್ಕಾರ ಉತ್ತರ ಕೊಟ್ಟಿಲ್ಲ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಇವತ್ತು ಬಹಳ ಮುಖ್ಯವಾದ ವಿಧೇಯಕರ ಬಗ್ಗೆ ಚರ್ಚೆ ಇದೆ. ಇರತಕ್ಕಂಥ ಸಮಯವನ್ನು ಅದಕ್ಕೋಸ್ಕರ ಖರ್ಚು ಮಾಡೋಣ. ಪ್ರತಿದಿನ ಎರಡು ಮೂರು ಗಂಟೆ ಹೀಗೆ ಕಳೆಯುವುದು ಮಾಮೂಲಾಗಿ ಬಿಟ್ಟಿದೆ. ಇವತ್ತು ಹಾಗೆ ದಯವಿಟ್ಟು ಬೇಡ ಎಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಎಚ್ ಕೌಜಲಗಿ : ಇವತ್ತಿನ ದಿವಸ ರಾಜ್ಯದಲ್ಲಿ ಕಳ್ಳಬಟ್ಟಿ ಕುಡಿದು ಜನರು ಸಾಯುತ್ತಿದ್ದಾರೆ. ಇದರ ಬಗ್ಗೆ ನಾವು ನಿಮ್ಮ ನಜರಿಗೆ ತಂದರೂ ಸಹಿತ, ಏನೂ ಕ್ರಮ ತೆಗೆದುಕ್ಕೊತ್ತೀರಿ ಎಂದು ಕೇಳಿದರೂ ಕೂಡ, ಉತ್ತರ ಹೇಳಿದ್ದರೆ ಇನ್ನೇನು ಕೇಳಬೇಕು ?

ಉಪಾಧ್ಯಕ್ಷರು : ನೀವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಸ್. ಎಚ್. ಕೌಜಲಗಿ : ಅಧ್ಯಕ್ಷರೇ, ಒಂದು ನಿಮಿಷ, What is the action Government is going to take.

ಶ್ರೀ ಎಂ. ವೀರಪ್ಪ ಮೊಯಿಲಿ : ಈ ಬಗ್ಗೆ ವರದಿಯನ್ನು ತರಿಸಿ ಈ ದಿವಸ ಸದನ ಮುಗಿಯುವ ಮೊದಲು ಹೇಳಿಕೆಯನ್ನು ಕೊಡುತ್ತೇನೆ.

(v) ವಿಷಯ : ವಿದ್ಯುಚ್ಛಕ್ತಿ ಸರಬರಾಜಿನ ಬಗ್ಗೆ ಸದನ ಸಮಿತಿ ಕೊಟ್ಟಿರುವ ಮಧ್ಯಂತರವರದಿಯನ್ನು ಜಾರಿಗೆ ತರುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಸದನದಲ್ಲಿ ಮುಖ್ಯಮಂತ್ರಿಗಳು ಇದ್ದಾರೆ. ವಿದ್ಯುಚ್ಛಕ್ತಿ ಬಗ್ಗೆ ಇಲ್ಲಿ ನಿರಂತರವಾಗಿ ಚರ್ಚೆ ನಡೆದು ಸದನಸಮಿತಿಯನ್ನು ಮಾಡಿ, ಆ ಸಮಿತಿಯು ಮಧ್ಯಂತರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಈ ಬಗ್ಗೆ ಸಮಿತಿಯವರು ವರದಿಯನ್ನು ಎಷ್ಟು ತರಾತುರಿಯಲ್ಲಿ ಕೊಟ್ಟಿದ್ದಾರೆ ಎಂದರೆ ಬಹಳ ಪ್ರಾಮಾಣಿಕವಾಗಿ ವಿಚಾರ ಮಾಡಿ ಕೊಟ್ಟಿದ್ದಾರೆ. ತಾವು ಆ ವರದಿಯನ್ನು ಒಪ್ಪಿ, ಏನು ಕ್ರಮ ತೆಗೆದುಕೊಂಡಿದ್ದಿರಿ ಎನ್ನುವ ಬಗ್ಗೆ ಯಾವುದೇ ಮಾಹಿತಿ ಇದುವರೆಗೂ ಬರಲಿಲ್ಲ. ನಾನು ಇವತ್ತು ಕೇಳುತ್ತಿದ್ದೇನೆ, ಬರೇ ನನ್ನ ತಾಲ್ಲೂಕು ಚಾಮರಾಜನಗರ ಒಂದರಲ್ಲೇ 5 ಕೋಟಿ ರೂಪಾಯಿ ಬೆಳೆ ನಷ್ಟವಾಗುತ್ತಿದೆ. ಕೋಲಾರ ಜಿಲ್ಲೆಯಂತೂ ತೀರಾ ಕಗ್ಗತ್ತಲಾಗಿದೆ. ಇದು ರಾಜ್ಯದ ಸಮಗ್ರ ಪರಿಸ್ಥಿತಿ ಆಗಿದೆ. ಈ ಬಗ್ಗೆ ಸರ್ಕಾರ ಪರಿಣಾಮಕಾರಿ ಕ್ರಮ ತೆಗೆದುಕೊಳ್ಳಬೇಕು ಮತ್ತು ಅನುಕೂಲ ಮಾಡಿಕೊಡಬೇಕೆಂದು ನಾನು ಹೇಳುತ್ತಿದ್ದೇನೆ. ಸರ್ಕಾರ ಈ ಮಧ್ಯಂತರ ವರದಿ ಬಗ್ಗೆ ಏನು ಕ್ರಮ ಕೈಗೊಂಡಿದೆ ಎಂದು ಹೇಳಿ ಮುಖ್ಯಮಂತ್ರಿಗಳು ಸದನದ ಮುಂದೆ ಹೇಳಿಕೆಯನ್ನು ಕೊಡಬೇಕಾಗುತ್ತದೆ. ನಾವು ಒಂದಲ್ಲ, ಅನೇಕ ಬಾರಿ ಸಭೆಸೇರಿದ್ದು ಆಯಿತು, ಇಲ್ಲಿ ಪ್ರತಿಭಟನೆ ಮಾಡಿದ್ದೂ ಆಯಿತು. ಇವತ್ತು ಸಹ ಪ್ರತಿಭಟನೆ ಮಾಡಿ ಕೋಲಾರ ಜಿಲ್ಲೆಯಿಂದ, ಅನೇಕ ಕಡೆಗಳಿಂದ ರೈತರು ಬರುತ್ತಿದ್ದಾರೆ. ಮುಖ್ಯಮಂತ್ರಿಗಳು ಚಳುವಳಿ ಮಾಡತಕ್ಕದ್ದನ್ನು ಒಂದು ದಿವಸ ಮುಂದಕ್ಕೆ ಹಾಕಿ ನಾನು ಹೇಳಿಕೆ ಕೊಡುತ್ತೇನೆ ಎಂದು

ಅವರು ಮೊನ್ನೆ ದಿವಸ ಭರವಸೆಯನ್ನು ಕೊಟ್ಟರು. ಅದ್ದರಿಂದ ದಯಮಾಡಿ ತಮಗೆ ಹೇಳುತ್ತಿದ್ದೇನೆ, ಮಧ್ಯಂತರ ವರದಿ ಏನು ಬಂದಿದೆ, ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಹೇಳಬೇಕು. ಇವತ್ತು ಬೆಳಿಗ್ಗೆ ಚಾಮರಾಜನಗರದಿಂದ ಜನರು ಬಂದಿದ್ದಾರೆ. ನೀರಾವರಿ ಪಂಪುಸೆಟ್ಟುಗಳು ಸಂಪೂರ್ಣವಾಗಿ ಕೆಟ್ಟುಹೋಗಿವೆ. ದಯವಿಟ್ಟು ಸರ್ಕಾರ ಪರಿಣಾಮಕಾರಿಯಾದಂಥ ಏನೊಂದು ಕ್ರಮ ಕೈಗೊಂಡಿದೆ ಎಂದು ಹೇಳಬೇಕೆಂದು ತಮ್ಮ ಮೂಲಕ ಮುಖ್ಯಮಂತ್ರಿಗಳಲ್ಲಿ ಕೇಳುತ್ತೇನೆ.

ಶ್ರೀ ಸಿ. ಬೈರೇಗೌಡ (ವೇಮಗಲ್) : ನಾನು ಸಹ ಇದರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇನೆ. ಆದರೆ ಸರ್ಕಾರದಿಂದ ಯಾವುದೇ ಉತ್ತರ ಬರುತ್ತಿಲ್ಲ. ಇವತ್ತು ಕೋಲಾರ ಜಿಲ್ಲೆ ಮತ್ತು ಬೆಂಗಳೂರು ಜಿಲ್ಲೆಯಿಂದ ನೂರಾರು ರೈತರು ಬರುತ್ತಿದ್ದಾರೆ. ಮುಖ್ಯಮಂತ್ರಿಗಳ ಮನೆಮುಂದೆ ಧರಣಿ ಸತ್ಯಾಗ್ರಹ ಮಾಡಬೇಕೆಂದು ರೈತರು ಹೋಗಿದ್ದಾರೆ. ಅವರು ಸಣ್ಣಪುಟ್ಟ ಪ್ರತಿಭಟನೆ ಮಾಡಿದ್ದು ಆಯಿತು. ದೇವನಹಳ್ಳಿಯಲ್ಲಿ, ಚಿಂತಾಮಣಿಯಲ್ಲಿ, ಕೋಲಾರದಲ್ಲಿ ಪ್ರತಿಭಟನೆ ನಡೆಸಿದ್ದಾಯಿತು. ಮುಳಬಾಗಿಲು, ಕೋಲಾರದಲ್ಲಿ ನಡೆಯಿತು.

ಉಪಾಧ್ಯಕ್ಷರು : ಬೈರೇಗೌಡರೇ, ನೀವು ಕುಳಿತುಕೊಳ್ಳಿ

ಶ್ರೀ ಸಿ. ಬೈರೇಗೌಡ : ಪರಿಸ್ಥಿತಿ ದಿನೆದಿನೇ ಕೆಡುತ್ತಿದೆ. ಇವತ್ತಿನದಿವಸ ಕೋಲಾರಜಿಲ್ಲೆಯಿಂದ ಬೆಂಗಳೂರು ಜಿಲ್ಲೆಯಿಂದ ರೈತರು ಬರುತ್ತಿದ್ದಾರೆ. ರೈತರು ಮನೆಬಾಗಿಲಿಗೆ ಬಂದು ಹೇಳಿದರೂ ಕೂಡ ಏನೂ ಕ್ರಮ ತೆಗೆದುಕೊಳ್ಳದಿದ್ದರೆ ಹೇಗೆ? ನಿನ್ನೆ ಉಪಮುಖ್ಯಮಂತ್ರಿಗಳು ಹೇಳಿದರು ಏನೆಂದರೆ ಇವತ್ತಿನ ದಿವಸ ತಾವು ಹೈದರಾಬಾದಿಗೆ ಹೋಗಿ ನಾಳೆ ಸ್ಟೇಟ್‌ಮೆಂಟ್ ಮಾಡುತ್ತೇನೆ ಎಂದು. ಆದರೆ ಆ ಪರಿಸ್ಥಿತಿ ಇಲ್ಲ. ಒಂದು ನಿಮಿಷ ಕೂಡ ತಡೆಯುವುದಕ್ಕೆ ಸಾಧ್ಯವಿಲ್ಲದೇ ಇರತಕ್ಕಂಥ ಪರಿಸ್ಥಿತಿ ಉಂಟಾಗಿದೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ತೀವ್ರವಾಗಿ ಗಮನ ಹರಿಸಬೇಕೆಂದು ಮತ್ತೊಮ್ಮೆ ತಮ್ಮ ಮೂಲಕ ನಾನು ವಿನಂತಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ವಿದ್ಯುಚ್ಛಕ್ತಿ ಮಂತ್ರಿಗಳು ಎಲ್ಲಿ ಹೋಗಿದ್ದಾರೋ ಗೊತ್ತಿಲ್ಲ. ಅವರು ಈ ಸದನದಲ್ಲಿ ಇರಬೇಕಾಗಿತ್ತು. ಅವರು ಹೈದರಾಬಾದಿಗೆ ಹೊಗಿದ್ದಾರೋ ಅಥವಾ ಇನ್ನು ಎಲ್ಲಿಗೆ ಹೋಗಿದ್ದಾರೋ ನನಗೆ ಗೊತ್ತಿಲ್ಲ. ಅವರು ಈ ಸದನಕ್ಕೆ ಬರಲೇ ಇಲ್ಲ. ಅವರನ್ನು ಅನೇಕಬಾರಿ ನಾವು ಕೇಳಿದ್ದಾಯಿತು. ಇದು ಬಹಳ ಅತ್ಯಂತ ನೋವಿನ ಪ್ರಸಂಗ ಆಗಿದೆ . ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗ ಸ್ಪಷ್ಟನೆ ಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು) : ಸನ್ಮಾನ್ಯ ಉಪಾಧ್ಯಕ್ಷರೇ, ವಿದ್ಯುಚ್ಛಕ್ತಿ ಬಗ್ಗೆ, ಸದನದ ಎಲ್ಲಾ ಸದಸ್ಯರ ಕಳಕಳಿ ಇದೆ. ಅದು ತಮಗೆ ಗೊತ್ತಿದೆ. ಇದು ಇಡೀ ವ್ಯವಸ್ಥೆಯ ಒಂದು ಪ್ರಶ್ನೆ. ಇದರ ಬಗ್ಗೆ ಸದನದ ಸಮಿತಿಯನ್ನೂ ಕೂಡ ಮಾಡಿ ಆಗಿದೆ . ತಾವು ಕೂಡ ಹೆಚ್ಚಿನ ಸಹಕಾರ ಕೊಟ್ಟು ಒಂದು ಮಧ್ಯಂತರ ವರದಿಯನ್ನು ಕೊಟ್ಟಿದ್ದೀರಿ. ಆ ಮುಧ್ಯಂತರ ವರದಿಯ ಶಿಫಾರಸ್ಸನ್ನು ಪರಿಶೀಲನೆ